ಪ್ರತಿ ಮಳೆಗಾಲದ ಹಿಂದೊಂದು ಸುಡುಧಗೆಯ ಬೇಸಿಗೆಯಿರುತ್ತದೆ. ಆದರೆ, ಬೇಸಿಗೆಯ ಪಾಠಗಳನ್ನು ಮಳೆದಿನಗಳಲ್ಲಿ ನಾವು ಮರೆತುಬಿಡುತ್ತೇವೆ. ಬೇಸಿಗೆಯಲ್ಲಿ ಮೈಮನಸ್ಸು ಸುಣ್ಣವಾದುದು ಮಳೆತಂಪಿನ ಆರ್ದ್ರತೆಯಲ್ಲಿ ಮರೆತೇ ಹೋಗುತ್ತದೆ. ಮಳೆಯ ಮಹತ್ವ ನಮಗೆ ಮತ್ತೆ ಅರಿವಾಗುವುದು ಬೇಸಿಗೆಯ ಕೆನ್ನಾಲಗೆಗಳು ಮರಳಿ ಚಾಚಿಕೊಂಡಾಗಲೇ. ಈ ಅಭ್ಯಾಸ ಇನ್ನಾದರೂ ಕೊನೆಗೊಳ್ಳಬೇಕು. ಮಳೆ ಸುರಿಯುವ ಹೊತ್ತು ಮಣ್ಣಿನ ಕಣ್ಣುಗಳು ಅರಳುವ ಸಮಯ. ಇದು ನಮ್ಮ ಅಂತರಂಗದ ಕಣ್ಣುಗಳು ತೆರೆಯುವ ಸಮಯವೂ ಆಗಬೇಕು. ಅಂತರಂಗ, ಅಂತಃಕರಣ, ಅಂತರ್ಜಲ - ಇವೆಲ್ಲವೂ ಮಳೆಯೊಂದಿಗೆ ತಳುಕು ಹಾಕಿಕೊಂಡಿರುವ ಹಾಗೂ ಕರುಳಬಳ್ಳಿಯ ನಂಟು ಇರುವ ನುಡಿಸಸಿಗಳು. ಮಳೆಯ ಮುನ್ನುಡಿ ಆರಂಭಗೊಂಡಿರುವ ಸಮಯದಲ್ಲಿ, ಮಳೆ ಕಾಳಜಿಯ ಒಂದು ಲಹರಿ.

■ ಮಹತಿ

